KAMD210018092021

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕೃಷ್ಣರಾಜಪೇಟೆ

## : ಉಪಸ್ಥಿತರು :

**ಡಾ. ಚಾಂದಿನಿ.ಎನ್., ಬಿ.ಎ.ಎಲ್.,ಎಲ್ಎಲ್.ಎಂ., ಪಿ.ಹೆಚ್.ಡಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಕೃಷ್ಣರಾಜಪೇಟೆ**

**ದಿನಾಂಕಃ 19 ನೇ ಆಗಸ್ಟ್, 2026,**

**ಸಿ.ಸಿ. ನಂ.1136/2021**

**ಪಿರ್ಯಾದುದಾರರು:** ಕರ್ನಾಟಕ ರಾಜ್ಯದ ಪರವಾಗಿ ಕೆ.ಆರ್.ಪೇಟೆ ಟೌನ್ ಆರಕ್ಷಕ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

**ಆರೋಪಿಗಳು ಃ**

1. ಪ್ರವೀಣ್
   ಬಿನ್ ಕುಮಾರ,
   ವಯಸ್ಸು 21 ವರ್ಷ,

2. ರವಿ @ ರವೀಕುಮಾರ್ ಕೆ ಎಸ್
   ಬಿನ್ ಸುಬ್ಬೇಗೌಡ,
   ಸುಮಾರು 45 ವರ್ಷ,

3. ಕುಮಾರ. ಕೆ
   ಬಿನ್ ಕೃಷ್ಣೇಗೌಡ
   ಸುಮಾರು 61 ವರ್ಷ,

4. ಸಮಿತ್ರ
ಕೋಂ ಕುಮಾರ
ಸುಮಾರು 49 ವರ್ಷ,

5. ಪ್ರೀತಿ ವಿ.ಎಸ್
ಕೋಂ ರವಿ
ಸುಮಾರು 35 ವರ್ಷ,
ಎಲ್ಲರ ವಾಸಃ ಕೊಟಗಹಳ್ಳಿ ಗ್ರಾಮ,
ಎಸ್.ಬಿ. ಹಳ್ಳಿ ಹೋಬಳಿ,
ಕೆ.ಆರ್.ಪೇಟೆ ತಾಲ್ಲೂಕು,
ಮಂಡ್ಯ.

(ಆರೋಪಿತರ ಪರ ಎಂ.ಸಿ.ಪಿ., ವಕೀಲರು)

| | |
|---|---|
| ಅಪರಾಧ ನಡೆದ ದಿನಾಂಕ | 24.02.2021 |
| ಅಪರಾಧ ವರದಿಯಾದ ದಿನಾಂಕ | 24.02.2021 |
| ಫಿರ್ಯಾದಿಯ ಹೆಸರು | ಜಯರಾಮೇಗೌಡ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 10.08.2026 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 10.08.2026 |
| ಆರೋಪಿಸಲಾದ ಅಪರಾಧಗಳು | ಭಾ.ದಂ.ಸಂ.ಕಲಂ 143,504,324,323,114,506 ಕಲಂ 149 ರಂತೆ |
| ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶದಂತೆ |

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕೆ.ಆರ್.ಪೇಟೆ.

**-:ತೀರ್ಪು:-**

ಕೃಷ್ಣರಾಜಪೇಟೆ ಟೌನ್ ಆರಕ್ಷಕ ಉಪ ನಿರೀಕ್ಷಕರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ, ಆರೋಪಿಗಳು ಭಾರತ ದಂಡ ಸಂಹಿತೆ ಕಲಂ

143,504,324,323,114,506 ಕಲಂ 149 ರಂತೆ ರ ಅಡಿಯಲ್ಲಿ ಅಪರಾಧ ಕೃತ್ಯವೆಸಗಿದ್ದಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-**

ದಿನಾಂಕ 24-02-2021 ರಂದು ಬೆಳಗೆ, 08-00 ಗಂಟೆಯಲ್ಲಿ, ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಸರಹದ್ದಿನ ಕೊಟಗಹಳ್ಳಿ, ಗ್ರಾಮದಲ್ಲಿ, ಆರೋಪಿತರುಗಳ ಪೈಕಿ ಆರೋಪಿ-5 ರವರು ನಿರ್ಮಿಸುತ್ತಿರುವ ಹೊಸ ಮನೆಯ ಮುಂದಿನ ಕಾಲು ದಾರಿಯಲ್ಲಿ, ಸಾಕ್ಷಿ 01, 02, 03 ರವರು ತಮ್ಮ ಜಮೀನಿನ ಕಡೆ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿತರುಗಳು ಅಕ್ರಮ ಗುಂಪು ಕಟ್ಟಿಕೊಂಡು ರಸ್ತೆಯ ವಿಚಾರದಲ್ಲಿ ಸಾಕ್ಷಿ 01, 02, 03 ರವರ ಮೇಲೆ ದ್ವೇಷವಿಟ್ಟುಕೊಂಡು, ಸಾಕ್ಷಿ 01, 02, 03 ರವರ ಮೇಲೆ ಜಗಳ ತೆಗೆದು ನಮ್ಮ ಮನೆಯ ಮುಂದೆ ತೀರುಗಾಡಬೇಡಿ, ಏಕೆ ತಿರುಗಾಡುತ್ತೀರ ಸೂಳೆ ಮಕ್ಕಳಾ, ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆರೋಪಿ 01 ರವರು ಕುಡುಗೋಲನ್ನು ಅಂಡುಮಗುಚಿಕೊಂಡು ಸಾಕ್ಷಿ 01 ರವರ ತಲೆಯ ಬಲಭಾಗಕ್ಕೆ ಹೊಡೆದು ರಕ್ತಗಾಯಮಾಡಿದ್ದು, ಆರೋಪಿ 02 ರವರು ದೊಣ್ಣೆಯಿಂದ ಸಾಕ್ಷಿ 01 ರವರ ಬಲಕಾಲಿನ ಮೇಲೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 03 ರವರು ತನ್ನ ಕೈಗಳಿಂದ ಸಾಕ್ಷಿ 03 ರವರ ಕಪಾಲಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆ, ಆರೋಪಿ 05 ರವರು ಸಾಕ್ಷಿ 03 ರವರನ್ನು ಉದ್ದೇಶಿಸಿ ಸೂಳೆ ಮುಂಡೆ ನೀನು ಬಂದಿದ್ದೀಯಾ ಎಂದು ಅವಾಚ್ಯವಾಗಿ ಬೈದು, ತನ್ನ ಕೈಗಳಿಂದ ಸಾಕ್ಷಿ 03 ರವರ ತಲೆಯ ಮೇಲೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 05 ಮತ್ತು 04 ರವರು ಸಾಕ್ಷಿ 02 ರವರನ್ನು ಕೆಳಗಡೆ ಬೀಳಿಸಿ, ಸಾಕ್ಷಿ 02 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ, ಆರೋಪಿ 05 ರವರು ದೊಣ್ಣೆಯಿಂದ ಸಾಕ್ಷಿ 02 ರವರ ತಲೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ, ಆರೋಪಿತರುಗಳು ಸಾಕ್ಷಿ 01, 02 ರವರ ಮೇಲೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುವುದು ಹಾಗು ಆರೋಪಿ 02 ರವರು ಆರೋಪಿ 05 ರವರಿಗೆ ಇವರನ್ನು ಬಿಡಬೇಡ ಕೊಲೆ ಮಾಡು ಅದೇನಾದರೂ

ನಾನು ನೋಡಿಕೊಳ್ಳುತ್ತೇನೆಂದು ಕುಮ್ಮಕ್ಕು ನೀಡಿರುವುದು ಮತ್ತು ಆರೋಪಿ 01 ರವರು ಇಂದು ಬಚಾವಾಗಿದ್ದೀರಾ ಮುಂದೆ ಯಾವಾತ್ತಾದರೂ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲಾ ಎಂದು ಸಾಕ್ಷಿ 01 ರಿಂದ 03 ರವರಿಗೆ ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ. ಆದ್ದರಿಂದ ಆರೋಪಿಗಳು ಮೇಲ್ಕಾಣಿಸಿದ ಅಪರಾಧವನ್ನು ಮಾಡಿರುತ್ತಾರೆಂದು ಆರೋಪಿಸಲಾಗಿದೆ.

3. ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿಗಳನ್ನು ಜಾಮೀನಿನ ಮೇಲೆ ಬಿಡಲಾಗಿರುತ್ತದೆ. ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿಗಳ ವಿರುದ್ಧದ ಆಪಾದನೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿಗಳು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಯಿತು.

4. ಆರೋಪಿಗಳ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ಪ್ರಾಸಾ-1 ರಿಂದ 3 ರವರನ್ನು ವಿಚಾರಣೆ ಮಾಡಿ ಸದರಿ ಸಾಕ್ಷಿಯಿಂದ ನಿಪಿ.1 ರಿಂದ ನಿಪಿ.4 ರಂತೆ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡು ಅಭಿಯೋಜನೆ ಪರ ವಿಚಾರಣೆ ಮುಕ್ತಾಯಗೊಳಿಸಲಾಗಿರುತ್ತದೆ.

5. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 3 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಆರೋಪಿಗಳ ಮೇಲೆ ಹೊರಿಸಲಾದ ದೋಷಾರೋಪಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯ ನುಡಿಯದ ಕಾರಣ ಆರೋಪಿಗಳ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಪಡೆದುಕೊಳ್ಳುವುದರಿಂದ ಕೈಬಿಡಲಾಗಿರುತ್ತದೆ. ಆರೋಪಿಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

6. ಉಭಯ ಪಕ್ಷಗಳ ವಾದಗಳನ್ನು ಆಲಿಸಲಾಯಿತು. ಕಡತದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

**ಅಂಶಗಳು**

1) ದಿನಾಂಕ 24-02-2021 ರಂದು ಬೆಳಗೆ, 08-00 ಗಂಟೆಯಲ್ಲಿ, ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಸರಹದ್ದಿನ ಕೊಟಗಹಳ್ಳಿ ಗ್ರಾಮದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ, 5 ನೇ ಆರೋಪಿಯು ನಿರ್ಮಿಸುತ್ತಿರುವ ಹೊಸ ಮನೆಯ ಮುಂದಿನ ಕಾಲು ದಾರಿಯಲ್ಲಿ, ಸಾಕ್ಷಿ 01 ರಿಂದ 03 ರವರು ಅವರ ಜಮೀನಿನ ಕಡೆ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತಾರೆ ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

2) ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ, ರಸ್ತೆಯ ವಿಚಾರದಲ್ಲಿ ಸಾಕ್ಷಿ 1 ರಿಂದ 3 ರವರ ಮೇಲೆ ಜಗಳ ತೆಗೆದು ನಮ್ಮ ಮನೆಯ ಮುಂದೆ ತೀರುಗಾಡಬೇಡಿ, ಏಕೆ ತಿರುಗಾಡುತ್ತೀರ ಸೂಳೆ ಮಕ್ಕಳಾ, ಬೋಳಿ ಮಕ್ಕಳಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

3) ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ, 1 ನೇ ಆರೋಪಿಯು ಕುಡುಗೋಲಿನಿಂದ ಸಾಕ್ಷಿ ರವರ ತಲೆಯ ಬಲಭಾಗಕ್ಕೆ ಹೊಡೆದು ರಕ್ತಗಾಯ

ಮಾಡಿದ್ದು, 2 ನೇ ಆರೋಪಿಯು ದೊಣ್ಣೆಯಿಂದ ಸಾಕ್ಷಿ ರವರ ಬಲಕಾಲಿನ ಮೇಲೆ ಹೊಡೆದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

4) ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ, ಅವರ ಪೈಕಿ 1 ನೇ ಆರೋಪಿಯು ಕೈಗಳಿಂದ ಸಾಕ್ಷಿ ರವರ ಕಪಾಲ ಹಾಗೂ ತಲೆಯ ಮೇಲೆ ಹೊಡೆದು ನೋವುಂಟು ಮಾಡಿದ್ದು, 4 ಮತ್ತು 5 ನೇ ಆರೋಪಿಯು ಸಾಕ್ಷಿ 2 ರವರನ್ನು ಕೆಳಗಡೆ ಬೀಳಿಸಿ ಅವರ ತಲೆ ಕೂದಲನ್ನು ಹಿಡಿದು ಎಡೆದಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

5) ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಸದರಿ ವಿಷಯವಾಗಿ ಮುಂದುವರೆಸುತ್ತಾ, ಅವರ ಪೈಕಿ 2 ನೇ ಆರೋಪಿಯು 5 ನೇ ಆರೋಪಿಗೆ ಇವರನ್ನು ಬಿಡಬೇಡ ಕೊಲೆ ಮಾಡು ಅದೇನಾದರೂ ನಾನು ನೋಡಿಕೊಳ್ಳುತ್ತೇನೆಂದು ಅಪರಾಧವೆಸಗಲು ದುಷ್ ಪ್ರೇರಣೆ ನೀಡಿರುತ್ತಾರೆ. ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.114 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

6) ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ, ಅವರ ಪೈಕಿ 1 ನೇ ಆರೋಪಿಯು ಸಾಕ್ಷಿ 1 ರಿಂದ 3 ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ 149 ರ ಅಡಿಯಲ್ಲಿ

ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

7) ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

**ಅಂಶ-1 ರಿಂದ 6 ಃ ನಕಾರಾತ್ಮಕವಾಗಿ**
**ಅಂಶ-7 ಃ ಅಂತಿಮ ಆದೇಶದಂತೆ ಈ ಕೆಳಗಿನಂತೆಃ**

-ಃ **<u>ಕಾ ರ ಣ ಗ ಳು</u>** ಃ-

9. **<u>ಅಂಶ-1 ರಿಂದ 6 ಕ್ಕೆಃ</u>** ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಲಾಗಿರುತ್ತದೆ.

10. ದಿನಾಂಕ 24-02-2021 ರಂದು ಬೆಳಗೆ, 08-00 ಗಂಟೆಯಲ್ಲಿ, ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಸರಹದ್ದಿನ ಕೊಟಗಹಳ್ಳಿ, ಗ್ರಾಮದಲ್ಲಿ, ಆರೋಪಿತರುಗಳ ಪೈಕಿ ಆರೋಪಿ-5 ರವರು ನಿರ್ಮಿಸುತ್ತಿರುವ ಹೊಸ ಮನೆಯ ಮುಂದಿನ ಕಾಲು ದಾರಿಯಲ್ಲಿ, ಸಾಕ್ಷಿ 01, 02, 03 ರವರು ತಮ್ಮ ಜಮೀನಿನ ಕಡೆ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿತರುಗಳು ಅಕ್ರಮ ಗುಂಪು ಕಟ್ಟಿಕೊಂಡು ರಸ್ತೆಯ ವಿಚಾರದಲ್ಲಿ ಸಾಕ್ಷಿ 01, 02, 03 ರವರ ಮೇಲೆ ದ್ವೇಷವಿಟ್ಟುಕೊಂಡು, ಸಾಕ್ಷಿ 01, 02, 03 ರವರ ಮೇಲೆ ಜಗಳ ತೆಗೆದು ನಮ್ಮ ಮನೆಯ ಮುಂದೆ ತೀರುಗಾಡಬೇಡಿ, ಏಕೆ ತಿರುಗಾಡುತ್ತೀರ ಸೂಳೆ ಮಕ್ಕಳಾ, ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆರೋಪಿ 01 ರವರು ಕುಡುಗೋಲನ್ನು ಅಂಡುಮಗುಚಿಕೊಂಡು ಸಾಕ್ಷಿ 01 ರವರ ತಲೆಯ ಬಲಭಾಗಕ್ಕೆ ಹೊಡೆದು ರಕ್ತಗಾಯಮಾಡಿದ್ದು, ಆರೋಪಿ 02 ರವರು ದೊಣ್ಣೆಯಿಂದ ಸಾಕ್ಷಿ 01 ರವರ

ಬಲಕಾಲಿನ ಮೇಲೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 03 ರವರು ತನ್ನ ಕೈಗಳಿಂದ ಸಾಕ್ಷಿ 03 ರವರ ಕಪಾಲಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆ, ಆರೋಪಿ 05 ರವರು ಸಾಕ್ಷಿ 03 ರವರನ್ನು ಉದ್ದೇಶಿಸಿ ಸೂಳೆ ಮುಂಡೆ ನೀನು ಬಂದಿದ್ದೀಯಾ ಎಂದು ಅವಾಚ್ಯವಾಗಿ ಬೈದು, ತನ್ನ ಕೈಗಳಿಂದ ಸಾಕ್ಷಿ 03 ರವರ ತಲೆಯ ಮೇಲೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 05 ಮತ್ತು 04 ರವರು ಸಾಕ್ಷಿ 02 ರವರನ್ನು ಕೆಳಗಡೆ ಬೀಳಿಸಿ, ಸಾಕ್ಷಿ 02 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ, ಆರೋಪಿ 05 ರವರು ದೊಣ್ಣೆಯಿಂದ ಸಾಕ್ಷಿ 02 ರವರ ತಲೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ, ಆರೋಪಿತರುಗಳು ಸಾಕ್ಷಿ 01, 02 ರವರ ಮೇಲೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುವುದು ಹಾಗು ಆರೋಪಿ 02 ರವರು ಆರೋಪಿ 05 ರವರಿಗೆ ಇವರನ್ನು ಬಿಡಬೇಡ ಕೊಲೆ ಮಾಡು ಅದೇನಾದರೂ ನಾನು ನೋಡಿಕೊಳ್ಳುತ್ತೇನೆಂದು ಕುಮ್ಮಕ್ಕು ನೀಡಿರುವುದು ಮತ್ತು ಆರೋಪಿ 01 ರವರು ಇಂದು ಬಚಾವಾಗಿದ್ದೀರಾ ಮುಂದೆ ಯಾವಾತ್ತಾದರೂ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲಾ ಎಂದು ಸಾಕ್ಷಿ 01 ರಿಂದ 03 ರವರಿಗೆ ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ ಎಂದು ಆರೋಪಿಸಿರುವುದು ಕಂಡುಬರುತ್ತದೆ.

11. ಈ ಪ್ರಕರಣವನ್ನು ಸಾಬೀತುಪಡಿಸುವ ಸಲುವಾಗಿ ಸಾಕ್ಷಿದಾರರನ್ನು ಚಾಸಾ-1 ರವರನ್ನು ಪ್ರಾಸಾ-1 ಎಂದು, ಚಾಸಾ-2 ರವರನ್ನು ಪ್ರಾಸಾ2 ಎಂದು, ಚಾಸಾ-3 ರವರನ್ನು ಪ್ರಾಸಾ-3 ಎಂದು, ವಿಚಾರಣೆಗೆ ಒಳಪಡಿಸಿ, ಸದರಿ ಸಾಕ್ಷಿಗಳಿಂದ ನಿಪಿ.1 ರಿಂದ 4 ದಾಖಲೆಗಳನ್ನು ನಿಪಿ.1 ದೂರು, ನಿಪಿ.2 ಪಂಚನಾಮೆ, ನಿಪಿ.3 ಮತ್ತು 4 ಪ್ರಾಸಾ 2 ಮತ್ತು ಪ್ರಾಸಾ 3 ರವರ ಹೇಳಿಕೆಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ.

12. ಈ ಪ್ರಕರಣದಲ್ಲಿ ದೂರು ಮತ್ತು ಪಂಚನಾಮೆ ಸಾಕ್ಷಿ ಎನ್ನಲಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು ಸದರಿ ಸಾಕ್ಷಿಯು ತಮ್ಮ

ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು, ಚಾಸಾ-2 ನನ್ನ ಅಣ್ಣ, ಚಾಸಾ-3 ನನ್ನ ಹೆಂಡತಿ, ಚಾಸಾ-4 ರಿಂದ 7 ಗೊತ್ತು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ,ಆರೋಪಿತರ ಮತ್ತು ನಮ್ಮ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ, ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದು, ನನಗಾಗಲಿ ಚಾಸಾ-2 ಮತ್ತು 3 ರವರಿಗಾಗಲಿ, ಕೈಯಿಂದ ಹಾಗೂ ದೊಣ್ಣೆ ಮತ್ತು ಕುಡುಗೋಲಿನಿಂದ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ, ನಾನು ಈ ಸಂಬಂಧ ಆರೋಪಿತರ ವಿರುದ್ಧ ಯಾವುದೇ ನಿಪಿ1 ರಂತೆ ದೂರನ್ನು ನೀಡಿಲ್ಲ, ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ನಿಪಿ2 ರಂತೆ ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಕುಡುಗೋಲುನ್ನು ನೋಡಿರುವುದಿಲ್ಲ, ನಿಪಿ-1 ಮತ್ತು 2 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

13. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಣಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು ತಮ್ಮ ಪಾಟೀಸವಾಲಿನಲ್ಲಿ ಪ್ರಾಸಾ-1 ರವರು ನೀಡಿದ್ದಾರೆ ಎನ್ನಲಾದ ನಿಪಿ.1 ದೂರು ಹಾಗೂ ಸಾಕ್ಷಿಯ ಸಮಕ್ಷಮ ಜರುಗಿಸಲಾಗಿದೆ ಎನ್ನಲಾದ ನಿಪಿ.2 ಪಂಚನಾಮೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ ಕೇಳಿದಾಗ್ಯೂ ಸಹ ಅಭಿಯೋಜನೆಗೆ ಪೂರಕವಾಗಿ ಯಾವುದೇ ಒಪ್ಪಿಗೆಗಳನ್ನು ಪಡೆಯುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಪ್ರಾಸಾ-1 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಪ್ರಾಸಾ-1 ರವರ ಸಾಕ್ಷವನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

14. ಈ ಪ್ರಕರಣದಲ್ಲಿ ಸಾಕ್ಷಿ ಎನ್ನಲಾದ ಚಾಸಾ-2 ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿದ್ದು ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು, ಚಾಸಾ-1 ನನ್ನ ತಮ್ಮ, ಚಾಸಾ-3 ನನ್ನ ತಮ್ಮನ ಹೆಂಡತಿ, ಚಾಸಾ-4 ರಿಂದ 7 ಗೊತ್ತು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಆರೋಪಿತರ ಮತ್ತು ನಮ್ಮ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ, ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದು, ನನಗಾಗಲಿ ಚಾಸಾ-1 ಮತ್ತು 3 ರವರಿಗಾಗಲಿ, ಕೈಯಿಂದ ಹಾಗೂ ದೊಣ್ಣೆ ಮತ್ತು ಕುಡುಗೋಲಿನಿಂದ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ, ಈ ಸಂಬಂಧ ನಾನು ಆರೋಪಿತರ ವಿರುದ್ಧ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

15. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು ತಮ್ಮ ಪಾಟೀಸವಾಲಿನಲ್ಲಿ ಪ್ರಾಸಾ-2 ರವರು ನೀಡಿದ್ದಾರೆ ಎನ್ನಲಾದ ನಿಪಿ.3 ಹೇಳಿಕೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ ಕೇಳಿದಾಗ್ಯೂ ಸಹ ಅಭಿಯೋಜನೆಗೆ ಪೂರಕವಾಗಿ ಯವುದೇ ಒಪ್ಪಿಗೆಗಳನ್ನು ಪಡೆಯುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಪ್ರಾಸಾ-2 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಪ್ರಾಸಾ-2 ರವರ ಸಾಕ್ಷವನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

16. ಈ ಪ್ರಕರಣದಲ್ಲಿ ಸಾಕ್ಷಿ ಎನ್ನಲಾದ ಚಾಸಾ-3 ರವರನ್ನು ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಚಾಸಾ-1 ನನ್ನ ಗಂಡ, ಚಾಸಾ-2 ನನ್ನ ಬಾವ, ಚಾಸಾ-4 ರಿಂದ 7 ಗೊತ್ತು, ಈ ಪ್ರಕರಣದ ಬಗ್ಗೆ

ಯಾವುದೇ ಮಾಹಿತಿ ಇಲ್ಲ, ಆರೋಪಿತರ ಮತ್ತು ನಮ್ಮ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ, ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದು, ನನಗಾಗಲಿ ಚಾಸಾ-1 ಮತ್ತು 2 ರವರಿಗಾಗಲಿ, ಕೈಯಿಂದ ಹಾಗೂ ದೊಣ್ಣೆ ಮತ್ತು ಕುಡುಗೋಲಿನಿಂದ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ, ಈ ಸಂಬಂಧ ನಾನು ಆರೋಪಿತರ ವಿರುದ್ದ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

17. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು ತಮ್ಮ ಪಾಟೀಸವಾಲಿನಲ್ಲಿ ಪ್ರಾಸಾ-3 ರವರು ನೀಡಿದ್ದಾರೆ ಎನ್ನಲಾದ ನಿಪಿ.4 ಹೇಳಿಕೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ ಕೇಳಿದಾಗ್ಯೂ ಸಹ ಅಭಿಯೋಜನೆಗೆ ಪೂರಕವಾಗಿ ಯವುದೇ ಒಪ್ಪಿಗೆಗಳನ್ನು ಪಡೆಯುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಪ್ರಾಸಾ-3 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಪ್ರಾಸಾ-3 ರವರ ಸಾಕ್ಷವನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

18. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 3 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಪ್ರಾಸಾ-1 ರಿಂದ ಪ್ರಾಸಾ 3 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಅಭಿಯೋಜನೆಯ ಪ್ರಕರಣದಂತೆ ಪ್ರಾಸಾ.1 ರವರು ನಿಪಿ.1 ರಂತೆ ದೂರನ್ನು ನೀಡಿದ್ದು, ನಿಪಿ.2 ರಂತೆ ಅವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿದ್ದಾರೆ ಎಂದು ಆರೋಪಿಗಳ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂಬುದಾಗಿರುತ್ತದೆ. ಅಭಿಯೋಜನೇ ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲೆಗಳ ಸಾಕ್ಷ್ಯಗಳು ಒಂದಕ್ಕೊಂದು ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರಾಸಾ-1 ರಿಂದ 3 ರವರ ಸಾಕ್ಷ್ಯವು ಆರೋಪಿಗಳ

ಮೇಲೆ ಆರೋಪಿಸಿರುವಂತಹ ಅಪರಾಧಗಳನ್ನು ರುಜುವಾತುಪಡಿಸಲು ಸಹಕಾರಿಯಾಗುವುದಿಲ್ಲ ಎಂಬುದು ನ್ಯಾಯಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಆರೋಪಿಗಳ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅಭಿಯೋಜನೆಯ ಪ್ರಕರಣದಲ್ಲಿ ಸಂಶಯ ಉಂಟಾಗುತ್ತದೆ. ಸದರಿ ಸಂಶಯದ ಲಾಭವನ್ನು ಆರೋಪಿಗಳು ಪಡೆಯಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು ಅಂಶ-1 ರಿಂದ 6 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

19. **<u>ಅಂಶ-7 ಕ್ಕೆ</u>:** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿರುತ್ತದೆ.

## <u>ಆ ದೇ ಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಗಳ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ. 143,504,324,323,114,506 ಕಲಂ 149 ರಂತೆ ರ ಆರೋಪಗಳಿಂದ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ.

ಈ ಪ್ರಕರಣದ ಆರೋಪಿಗಳ ಮತ್ತು ಅವರ ಜಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ಆರೋಪಿಗಳ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಪಿ.ಎಫ್‌ನಂ.35/2021, ದಿನಾಂಕ 25.02.2021 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ದೊಣ್ಣೆ ಯನ್ನು ಮೌಲ್ಯರಹಿತವಾದ್ದರಿಂದ ಅಪೀಲು ಅವಧಿ ಮುಗಿದ ನಂತರ

ಕಾನೂನು ರೀತ್ಯಾ ವಿಲೇವಾರಿಗೆ ಆದೇಶಿಸಲಾಗಿದೆ ಹಾಗೂ ಕುಡುಗೋಲು ಮೌಲ್ಯಯುತವಾದ್ದರಿಂದ ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ಪರಿಶೀಲಿಸಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 19 ನೇ ಆಗಸ್ಟ್ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಡಾ. ಚಾಂದಿನಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೆ.ಆರ್.ಪೇಟೆ .

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

ಪ್ರಾಸಾ.1 ಃ ಜಯರಾಮೇಗೌಡ

ಪ್ರಾಸಾ.2 ಃ ಬೆಟ್ಟೇಗೌಡ

ಪ್ರಾಸಾ.3 ಃ ಶೀಲಾ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

ನಿಪಿ.1, 1 ಃ ದೂರು,

ನಿಪಿ.2, ಃ ಪಂಚನಾಮೆ

ನಿಪಿ.3 ಃ ಪ್ರಾಸಾ 2 ರವರ ಹೇಳಿಕೆ

ನಿಪಿ.4 ಃ ಪ್ರಾಸಾ 3 ರವರ ಹೇಳಿಕೆ

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

- ಇಲ್ಲ -

**ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

- ಇಲ್ಲ -

**<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು:-</u>**

- ಇಲ್ಲ -

(ಡಾ. ಚಾಂದಿನಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕೆ.ಆರ್.ಪೇಟೆ